ಉಡುಗೊರೆಯಾಗಿ ನೀಡುವುದರ ಜೊತೆಗೆ, ಕೇಂದ್ರ ಸರ್ಕಾರದಿಂದ ಅವರಿಗೆ ಭಾರತದ ಪೌರತ್ವವನ್ನು ಕೊಡಿಸಿದರು.

ಮುಂಬೈ ನಗರದಲ್ಲಿ ವಾಸವಾಗಿದ್ದುಕೊಂಡು, ಭಾರತದ ಬಹುತೇಕ ನಗರಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದ ಬಡೇ ಗುಲಾಂ ಅಲಿ ಖಾನ್ ಬಹು ಬೇಡಿಕೆಯ ಕಲಾವಿದರಾಗಿದ್ದರು. ಭಾರತದ ಚಿತ್ರರಂಗದ ಇತಿಹಾಸದಲ್ಲಿ ಸಿನಿಮಾ ಒಂದಕ್ಕೆ ಹಾಡಿದ ಮೊದಲ ಶಾಸ್ತ್ರೀಯ ಸಂಗೀತದ ಕಲಾವಿದರು ಈ ಗುಲಾಂ ಅಲಿ. 1960ರಲ್ಲಿ ಹಿಂದಿ ಚಿತ್ರರಂಗದ ಪ್ರಸಿದ್ಧ ಗಾಯಕ ಗಾಯಕಿಯರಾಗಿದ್ದ ಮಹಮ್ಮದ್ ರಫಿ ಮತ್ತು ಲತಾ ಮಂಗೇಶ್ಕರ್ ಅವರು ಪ್ರತಿ ಹಾಡಿಗೆ ಐನೂರು ರೂಪಾಯಿ ಸಂಭಾವನೆ ಪಡೆಯುತ್ತಿದ್ದ ಸಮಯದಲ್ಲಿ ಗುಲಾಂ ಅಲಿ ಖಾನ್ ಅವರು ಕೆ. ಆಸಿಫ್ ಅವರ 'ಮೊಘಲ್ ಎ ಅಜಮ್' ಎಂಬ ಹಿಂದಿ ಚಿತ್ರಕ್ಕೆ ಇಪ್ಪತ್ತೈದು ಸಾವಿರ ರೂಪಾಯಿ ಸಂಭಾವನೆ ಪಡೆದು ಎರಡು ಹಾಡುಗಳನ್ನು ಹಾಡಿದ್ದರು. ಸದಾ ಸಂಗೀತದ ಶ್ರೇಷ್ಠತೆಗಾಗಿ ತುಡಿಯುತ್ತಿದ್ದ ಅವರು ಹಿಂದೂಸ್ತಾನಿ ಸಂಗೀತದ ಹೊಸ ಹೊಸ ರಾಗಗಳ ಅನ್ವೇಷಣೆ ಕುರಿತಂತೆ ಹೆಚ್ಚಿನ ಒಲವು ತೋರಿಸುತ್ತಿರಲ್ಲ. ಇರುವ ರಾಗಗಳನ್ನು ತಮ್ಮ ಪ್ರತಿಭೆಯ ಮೂಲಕ ವಿಭಿನ್ನ ಹಾಡುಗಾರಿಕೆಯ ಮೂಲಕ ಜನಪ್ರಿಯಗೊಳಿಸಬೇಕೆಂಬುದು ಅವರ ನಿಲುವಾಗಿತ್ತು. ಅದೇ ರೀತಿ ಅವರು ಸಂಗೀತದಲ್ಲಿ ದೀರ್ಘ ಸಮಯದ ಆಲಾಪನೆಯ ಕಡು ವಿರೋಧಿಯಾಗಿದ್ದರು.

ತಮ್ಮ ಹಾಡುಗಾರಿಕೆಯಲ್ಲಿ ಅದರಲ್ಲೂ ವಿಶೇಷವಾಗಿ ದ್ರುಪದ್, ಠುಮ್ರಿ ಮತ್ತು ಖ್ಯಾಲ್ ಗಾಯನದಲ್ಲಿ ಅವರು ಆಚರಣೆಗೆ ತಂದ ನಾವಿನ್ಯತೆ ಮತ್ತು ಸ್ವರಗಳ ಬಳಕೆಯಲ್ಲಿ ಧ್ವನಿಯ ಏರಿಳಿತ, ಸಾಹಿತ್ಯದ ಸ್ಪಷ್ಟ ಉಚ್ಛಾರಣೆ ಮತ್ತು ರಾಗಗಳನ್ನು ಸಾಹಿತ್ಯಕ್ಕೆ ತಕ್ಕಂತೆ ವಿಸ್ತರಿಸುತ್ತಿದ್ದ ವೈಖರಿಗಳಿಂದಾಗಿ ಅವರನ್ನು ಹಿಂದೂಸ್ತಾನಿ ಸಂಗೀತ ಲೋಕದ ಅನಭಿಷಕ್ತ ದೊರೆ ಎಂದು ಕರೆಯಲಾಗುತ್ತಿತ್ತು. ಅವರು ಒಂದು ಕಛೇರಿಯಲ್ಲಿ ನೀಡಿದ ಗಾಯನ ಮತ್ತೊಂದರಲ್ಲಿ ಮರುಕಳಿಸುತ್ತಿರಲಿಲ್ಲ. ಅವರ ಸಂಗೀತ ಸಮುದ್ರದಿಂದ ಎದ್ದು ಬರುವ ಎಂದೂ ನಿಲ್ಲದ ಅಲೆಗಳಂತೆ ಶ್ರೋತೃಗಳಿಗೆ ಭಾಸವಾಗುತ್ತಿತ್ತು. ಅವರ ಇಂತಹ ದೈತ್ಯ ಪ್ರತಿಭೆಯ ಹಿಂದೆ ಲೋಕಸಂಗೀತದ ಪ್ರಭಾವವಿತ್ತು. ಒಂದು ಸಂಗೀತ ಕಛೇರಿ ಪಡೆಯುವ ನಿರ್ದಿಷ್ಟ ಸ್ವರೂಪ ಆ ಕ್ಷಣದಲ್ಲಿ ಕಲಾವಿದ ಮತ್ತು ಶ್ರೋತೃಗಳ ನಡುವೆ ಏರ್ಪಡುವ ಪರಸ್ಪರ ಸಂಹವನ ಹಾಗೂ ಪ್ರತಿಕ್ರಿಯೆಗಳ ಆಧಾರದ ಮೇಲೆ ನಿಂತಿರುತ್ತದೆ. ಗುಲಾಂ ಅಲಿ ಖಾನ್ ತಮ್ಮ ಭಾವಪೂರ್ಣ ಧ್ವನಿಯ ಮೂಲಕ ಎಲ್ಲಾ ಶ್ರೋತೃಗಳ ಮನಸ್ಸನ್ನು ಸೂಜಿಗಲ್ಲಿನಂತೆ ಹಿಡಿದಿಡುವ ಕಲೆಯನ್ನು ಬಲ್ಲವರಾಗಿದ್ದರು. ಇದಕ್ಕೆ ಪೂರಕವಾಗಿ ಅವರು ಪ್ರಸ್ತುತ ಪಡಿಸುತ್ತಿದ್ದ ಭಜನ್, ದ್ರುಪದ್ ಆಗಲಿ, ಠುಮ್ರಿ ಅಥವಾ ಖ್ಯಾಲ್ ಗಾಯನದ ಬಂದಿಶ್ ಅಥವಾ ಸಾಹಿತ್ಯ ರಚನೆಗಳು ಅವರ ಸಂಗೀತದ ಸಾಮರ್ಥ್ಯಕ್ಕೆ ನೆರವಾಗುತ್ತಿದ್ದವು. ರಾಗದ ಲಕ್ಷಣಗಳು, ಸ್ವರೂಪ ಇಲ್ಲವೆ, ಅವುಗಳ ಚೌಕಟ್ಟು ಒಂದೇ ಆಗಿದ್ದರೂ ಪ್ರತಿಯೊಬ್ಬ ಕಲಾವಿದ ಅವುಗಳನ್ನು ಪ್ರಸ್ತುತಪಡಿಸುವ ರೀತಿಯಿಂದಾಗಿ ಕೇಳುಗರಿಗೆ ಭಿನ್ನವಾದ ಅನುಭವ ನೀಡುತ್ತವೆ. ಇದು ಆಯಾ ಕಲಾವಿದನ ಮನೋಧರ್ಮ, ಸೃಜನಶೀಲತೆಯನ್ನು ಅವಲಂಬಿಸುತ್ತದೆ. ಖ್ಯಾಲ್ ಗಾಯನದ ಪ್ರಕಾರದಲ್ಲಿ ಕಲಾವಿದರಿಗೆ ಅಭಿವ್ಯಕ್ತಿಗೆ ಮುಕ್ತ ಅವಕಾಶಗಳಿದ್ದುದರಿಂದ ಗುಲಾಂ ಅಲಿ ಖಾನ್ ಇದನ್ನು ಸಮರ್ಥವಾಗಿ ಬಳಸಿಕೊಳ್ಳುವುದರ ಮೂಲಕ ಭಾರತದ ಸಂಗೀತ ಶ್ರೋತೃಗಳ ಮನದಲ್ಲಿ ಉಳಿದುಕೊಂಡರು.

ಖಯಾಲ್ ಗಾಯನದ ಬಂದಿಶ್‌ನಲ್ಲಿ ಸ್ಥಾಯಿ ಮತ್ತು ಅಂತರಾ ಎಂಬ ಎರಡು ಭಾಗಗಳಿದ್ದು, ವಿಲಂಬಿತ್ ಖಯಾಲ್ ಗಾಯನದಲ್ಲಿ ಸ್ವರ ಮತ್ತು ರಾಗಗಳ ವಿಸ್ತರಣೆ ಹಾಗೂ ಭಾವಗಳ